**CW : 1**

PW : 1

# CC No.406/2023

ದಿನಾಂಕಃ**16.04.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**.**

ಮುಂದುವರಿದ ಪಾಟೀ ಸವಾಲುಃಆರೋಪಿತರ ಪರ ವಕೀಲರಿಂದಃ

ತಕ್ಷೀರು ಸ್ಥಳದ ಮಹಜರು ಯಾವಾಗ ನಡೆಯಿತೆಂದು ಹೇಳಲಾಗುವುದಿಲ್ಲ. ಮಹಜರಿಗೆ ನಾನು ಅಶ್ರಫ್ ಮತ್ತು ಉಮ್ಮರ್ ಎನ್ನುವವರ ಜೊತೆ ಹೋಗಿದ್ದೆ. ಪೊಲೀಸರು ಕರೆದ ಕಾರಣ ನಾನು ಮಹಜರಿಗೆ ಹೋಗಿದ್ದೆನು. ಪೊಲೀಸರು ನನಗೆ ಬಾಯಿಮಾತಿನ ಮೂಲಕ ಕರೆದಿದ್ದರು. ಮಹಜರನ್ನು ನನನ ಸಮಕ್ಷಮ ಜರುಗಿಸಿದ್ದಾರೆ.

ಮಹಮದ್ ಅಶ್ರಫ್ ನನ್ನ ಸಂಬಂಧಿಕರು ಹಾಗೂ ಉಮ್ಮರ್ ನನ್ನ ಪರಿಚಯಸ್ಥರು. ಮಹಮದ್ ಅಶ್ರಫ್ ನನ್ನ ಅಕ್ಕನ ಮಗ. ಅವರು ನನ್ನ ಹತ್ತಿರದ ಸಂಬಂಧಿ. ಮಹಜರು ನಡೆಯಲಾಯಿತು ಎನ್ನುವ ಸ್ಥಳದಿಂದ ಮಹಮದ್ ಅಶ್ರಫ್ ರವರ ಮನೆ ಸುಮಾರು 3 ಕಿ ಮೀ ದೂರದಲ್ಲಿದೆ. ನಾನು ಮಹಜರಿಗೆ ಪೋ ಠಾಣೆಯಲ್ಲಿ ಸಹಿ ಮಾಡಿದ್ದೆ ಎಂದರೆ ನೆನಪಿಲ್ಲ. ಮಹಜರಿನ ಚೆಕ್ಕುಬಂದಿ ನಿಖರವಾಗಿ ಹೇಳಲಾಗುವುದಿಲ್ಲ. ಅದರ ಪೂರ್ವಕ್ಕೆ ನನಗೆ ಸೇರಿದ ಜಮೀನು ಇರುತ್ತದೆ. ನಾನು ಸುಳ್ಳು ದಾಖಲೆ ಸೃಷ್ಟಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಗಲಾಟೆ ಬೆ.10.00 ರಿಂದ 11 ರ ಸವಯದಲ್ಲಿ ಆಗಿದೆ. ನಾನು ಆಸ್ಪತ್ರೆಗೆ ಮ. 2.00 ಗಂಟೆಯ ಒಳಗೆ ಚಿಕಿತ್ಸೆಗಾಗಿ ದಾಖಲಾಗಿದ್ದೆನು. ಗಾಯದ ಪ್ರ ಪತ್ರದಲ್ಲಿ ನಮೂದಿಸಿರುವ ಗಾಯಕ್ಕೂ ಹಾಗು ನಾನು ವೈದ್ಯರಿಗೆ ಹೇಳಿದ ಗಾಯಕ್ಕೂ ತಾಳೆ ಇಲ್ಲ ಎಂದರೆ ಸರಿಯಲ್ಲ. ಗಾಯದ ಪ್ರ ಪತ್ರದಲ್ಲಿ ನಮೂದಿಸಿರುವ ಗಾಯಗಳು ನನಗೆ ಆಗಿಲ್ಲ ಎಂದರೆ ಸರಿಯಲ್ಲ. ನಾನು ವೈದ್ಯರಿಗೆ ಹೇಳಿರುವ ಹೇಳಿಕೆ ಸರಿಯಿರುವುದಿಲ್ಲ ಹಾಗೂ ನಾನು ಹೇಳುತ್ತಿರುವ ಕೃತ್ಯಕ್ಕೂ ತಾಳೆ ಇರುವುದಿಲ್ಲ ಆದಕಾರಣ ಘಟನೆ ಸಂಬಂಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

1 ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,

**CW : 1**

PW : 1

ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.